ಆತ ತಲೆಗೆ ಕೈಕೊಟ್ಟು ಚಿಂತಾಮಗ್ನನಾದ. ಒಂದು ದಾರಿಯನ್ನು ತೋರಿಸಿಕೊಡೋಣ ಎಂದು ಅವಳ ಹೃದಯ ತುಡಿಯಿತು. ಅಸಹಾಯಕತೆಯಿಂದ ಅವಳು ಜಗದೀಶನ ಹಣೆಯಲ್ಲಿ ದೃಷ್ಟಿನೆಟ್ಟು ನಿಂತಳು. ನಿದ್ದೆಯಿಂದ ಎಚ್ಚೆತ್ತವನಂತೆ ಆತ ತಲೆಯೆತ್ತಿದ.

'ಒಂದು ಸ್ಥಳವಿದೆ' ಆತ ಹೇಳಿದ: 'ರಾಮಾಚಾರ್ ನಾಲ್ಕು ಮೈಲು ದೂರ. ತಂದೆಯ ಸ್ನೇಹಿತ!'

ಆತ ಎದ್ದ. ಅವಳಿಗೆ ಏನೂ ಹೇಳುವುದಕ್ಕಿಲ್ಲ. ಆದರೂ ಅವಳಿಗೆ ಒಂದು ಬಗೆಯ ಸಂಕಟ. ಹೃದಯದಲ್ಲಿ ಏನೋ ಒಂದು ತಳಮಳ!

ಜಗದೀಶ ಕೇಳಿದ:

'ನನಗೆ ಇನ್ನೊಂದು ಸಹಾಯವನ್ನು ಮಾಡಬಹುದೇ?'

'ಏನು ಮಾಡಬೇಕು?' ಅವಳ ಶಬ್ದದಲ್ಲಿ ಯಾವುದೇ ಅವ್ಯಕ್ತ ವೇದನೆಯ ನೆರಳು ಬೀಸಿತು.

ಜಗದೀಶ ಹೇಳಿದ: 'ಈ ಪುಸ್ತಕ ಇತ್ಯಾದಿಗಳನ್ನು ಸದ್ಯಕ್ಕೆ ಇಲ್ಲಿ ಕಾಯ್ದಿಡಬೇಕು.'

ಅವಳು ಅದನ್ನು ಕೈನೀಡಿ ಸ್ವೀಕರಿಸಿದಳು. ಎರಡು ಕೈಗಳೂ ಪರಸ್ಪರ ಸೋಕಿದವು. ಅವಳು ಅದನ್ನು ಎದೆಗೆ ಸೇರಿಸಿ ಹಿಡಿದು ಒಳಗೆ ಹೋದಳು. ಎದೆಗೆ ಒತ್ತಿ ಹಿಡಿದುಕೊಂಡೇ ಮರಳಿ ಬಂದಳು. ಸಂಕೋಚದಿಂದ ಅವಳು ನೀಡಿದಳು:

'ಇದು ಕೈಯಲ್ಲಿರಲಿ!' ಎರಡು ರೂಪಾಯಿ ಮತ್ತು ಒಂದು ಚಿಕ್ಕ ಎಲೆಕ್ಟ್ರಿಕ್ ಟಾರ್ಚ್.

ಜಗದೀಶನ ಹೃದಯ ಕರಗಿತು. ಕಣ್ಣುಗಳು ತುಂಬಿದವು. ನೀಡಿದ ಕೈಯನ್ನಲ್ಲದೆ ಭಾರ್ಗವಿಯ ಮುಖದೆಡೆಗೆ ಆತ ನೋಡಿದ. ಆ ಪ್ರೇರಣೆ!... ಅವನದನ್ನು ಕೈ ನೀಡಿ ಪಡೆದು... ಹಾಗೆಯೇ ನಿಂತ.

'ನಾನು ಮುಂದಿನ ಭಾನುವಾರ ಬರುತ್ತೇನೆ.'

'ಇವತ್ತು ಬುಧವಾರ.'

'ಹೌದು.'

ಜಗದೀಶ ಅಂಗಳಕ್ಕಿಳಿದ. ತರಗೆಲೆಗಳ ಮೂಲಕ ಆತ ಹೋಗುವುದನ್ನು ನೋಡುತ್ತ ಭಾರ್ಗವಿ ನಿಂತಳು. ಅವಳ ಹೃದಯ ದೇಹದಿಂದ ಹೊರಟು ಹೋಗುತ್ತಿದೆ. ಈ ಹಿಂದೆಂದೂ ಆಗಿರದ ಒಂದು ನೋವು. ಕೆಲವೇ ಕ್ಷಣಗಳಲ್ಲಿ ಬದುಕಿನಲ್ಲಿ ಬದಲಾವಣೆ ಸಂಭವಿಸಿತು! ಕಣ್ಣೀರು ಅವಳ ಎದೆಭಾಗವನ್ನು ನೆನೆಯಿಸಿತು. ಗೋಡೆಯಲ್ಲಿ ಟಾರ್ಚ್ ಒಮ್ಮೆ ಮಿಂಚಿ ಮರೆಯಾಯಿತು. ಅವಳ ಕಣ್ಣುಗಳು ತುಂಬಿ ಹರಿದವು.

ಅವಳು ಒಳಗೆ ಹೋಗಿ ದೀಪದ ಬತ್ತಿ ಮೇಲೇರಿಸಿದಳು. ಬೆಳಕು ಹೆಚ್ಚಾಗಲಿಲ್ಲ... ಅವಳು ಆ ಕಟ್ಟನ್ನು ತೊಡೆಯ ಮೇಲಿಟ್ಟು ತುಂಬಾ ಹೊತ್ತು ಕುಳಿತಳು.

ಅವಳ ದೇಹವಿಡೀ ತುಂಬಾ ಬೆಚ್ಚಗಾಗಿದೆ... ಅವಳು ಎದ್ದು ಹೋಗಿ ತಣ್ಣೀರಿನಲ್ಲಿ ಮುಖ ತೊಳೆದು ಬಂದಳು. ಊಟ ಮಾಡಲಿಲ್ಲ. ಊಟ ಮಾಡಲು ಮನಸ್ಸಿಲ್ಲ. ಅವಳು ಪುಸ್ತಕಗಳನ್ನು ಒಂದೊಂದಾಗಿ ತೆಗೆದು ನೋಡುತ್ತ ಹಾಗೆಯೇ ಕುಳಿತಳು. ಹೊರಗೆ ಬೀಗ ತೆರೆಯುವ ಶಬ್ದ! ಅವಳು ದೀಪವಾರಿಸಿದಳು.

ಬಾಗಿಲು ತೆರೆದಾಗ ವಿದ್ಯುತ್ ಬೆಳಕು. ಬೆವರಿದ ಖಾಕಿ ಬಟ್ಟೆ ಮತ್ತು ತ್ವಚೆಯ ಗಂಧ!

'ಭಾರ್ಗವಿ!' ದಣಿದು ಕೃಶವಾದ ಶಬ್ದ 'ಭಾರ್ಗವಿ!'

'ಅಪ್ಪಾ!'

ಭಾರ್ಗವಿ ಎದ್ದು ಕುಳಿತಳು. ಹಪ್ಪಳದಾಕಾರದಲ್ಲಿ ವಿದ್ಯುತ್ ಪ್ರಕಾಶ ಅಲ್ಲಿ ಇಲ್ಲಿ ಬಿತ್ತು. ಕೊನೆಗೆ ದೀಪದತ್ತ ತಾಕಿತು. ಭಾರ್ಗವಿ ದೀಪ ಆರಿಸಿದಳು. ಕ್ಷೀಣಾಧಿಕ್ಯದಿಂದ ಅವಳ ಅಪ್ಪ ನೆಲದಲ್ಲಿ ಕುಳಿತರು. ಟೋಪಿ ಕಳಚಿ ಅವರೊಳಗಿರುವ ಹಳೆಯ ಬಟ್ಟೆ ತೆಗೆದು ಮುಖವೊರೆಸಿದರು.